# 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

## ಎಸ್.ಸಿ. ನಂ. 94/2023

ಪ್ರ.ವ.ಬೋ. ದಿನಾಂಕ – 04–02–2026

| | | | |
|---|---|---|---|
| ಸಾಕ್ಷಿದಾರರ ಹೆಸರು | – ರಾಜಶೇಖರ | ಫ್ರಾ.ಸಾ. | – 05 |
| ತಂದೆಯ ಹೆಸರು | – ಚಂದ್ರಪ್ಪ | ಚಾ.ಸಾ. | – 05 |
| ವಯಸ್ಸು | – 32 ವರ್ಷ | | |
| ಉದ್ಯೋಗ | – ವ್ಯವಸಾಯ | | |
| ವಾಸ ಸ್ಥಳ | – ಬಿ ದುರ್ಗ | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಖ್ಯ ವಿಚಾರಣೆ – ಸರ್ಕಾರಿ ಅಭಿಯೋಜಕರಿಂದ –**

ಚಾಸಾ:1, 7 ಮತ್ತು ಆರೋಪಿ ಗೊತ್ತು. ಚಾಸಾ:1 ಚಾಸಾ:7 ರವರ ತಾಯಿ. ಚಾಸಾ:4, 6 ಗೊತ್ತು.

ಆರೋಪಿ ಮತ್ತು ಚಾಸಾ:7 ಇವರ ನಡುವೆ ಆದ ಗಲಾಟೆಯನ್ನು ನಾನು ನೋಡಿಲ್ಲ, ಬಿಡಿಸಿಲ್ಲ, ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿಲ್ಲ.

(ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಅನುಮತಿ ನೀಡಲಾಯಿತು. )

**– ಪಾಟೀ ಸವಾಲು – ವಿಶೇಷ ಸರ್ಕಾರಿ ಅಭಿಯೋಜಕರಿಂದ –**

ದಿ. 14.9.2022 ರಂದು ಸಂಜೆ 6 ಗಂಟೆಗೆ ನಾನು ಮತ್ತು ಚಾಸಾ:4, 6 ನಮ್ಮ ಗ್ರಾಮದ ಕಾಶಿ ಮಹಾಲಿಂಗೇಶ್ವರ ಪ್ರೌಢಶಾಲೆ ಮುಂಭಾಗ ಆಟದ ಮೈದಾನದಲ್ಲಿ ಮಾತನಾಡುತ್ತ ಕುಳಿತಿದ್ದಾಗ ವಾಲಿಬಾಲ್ ಅಂಕಣದಲ್ಲಿ ವಾಲಿಬಾಲ್ ಆಡುತ್ತಿದ್ದ ನಮ್ಮ ಗ್ರಾಮದ ದೇವರಾಜ ಆರೋಪಿ ಮತ್ತು ಚಾಸಾ:7 ಇಬ್ಬರಿಗೂ ಜಗಳವಾಗುತ್ತಿದ್ದು ನಾವು ಮೂರು ಜನ ಹೋಗಿ ನೋಡಿದಾಗ ವಾಲಿಬಾಲ್ ಆಟವಾಡುವ ಪಾಯಿಂಟ್ ವಿಚಾರದಲ್ಲಿ ಆರೋಪಿಯು ಚಾಶಾ:7 ರವರಿಗೆ ಬಾಯಿಗೆ ಬಂದಂತೆ ಬೈದು, ಕೈ ಕಾಲುಗಳಿಂದ ಹೊಡೆದಿದ್ದು

ನಾನು ಚಾಸಾ:7 ರವರ ಮನೆಗೆ ಹೋಗಿ ಚಾಸಾ:1 ರವರನ್ನು ಕರೆದುಕೊಂಡು ಬಂದಿದ್ದು, ಆಗ ಆರೋಪಿಯು ಚಾಸಾ:7 ರವರಿಗೆ ಅವ್ಯಾಚ್ಯ ಶಬ್ದಗಳಿಂದ ಬೈದು, ಕೈ ಕಾಲುಗಳಿಂದ ಹೊಡೆಯುತ್ತಿದ್ದನ್ನು ನೋಡಿ ಚಾಸಾ:1 ರವರು ಜಗಳ ಬಿಡಿಸಲು ಹೋದಾಗ ಆರೋಪಿಯು ಚಾಸಾ:1 ರವರಿಗೆ ಅವ್ಯಾಚ್ಯ ಶಬ್ದಗಳಿಂದ ಬೈದು, ಕೈ ಕಾಲುಗಳಿಂದ ಹೊಡೆದು, ಕಲ್ಲನ್ನು ತೆಗೆದುಕೊಂಡು ಚಾಸಾ:1 ರವರ ಹೊಟ್ಟೆಗೆ, ಬೆನ್ನಿಗೆ ಹೊಡೆದು ಅವರ ಸೀರೆಯನ್ನು ಎಳೆದಾಡಿ ಜಾಕೀಟನ್ನು ಹರಿದು ಹಾಕಿ ಅವರ ಮಾನಕ್ಕೆ ಚ್ಯುತಿಯನ್ನುಂಟು ಮಾಡಿ ಅವರ ಕುತ್ತಿಗೆಗೆ ಕೈ ಹಾಕಿ ಸಾಯಿಸುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿದ್ದು, ನಾನು ಚಾಸಾ:4, 6 ಜಗಳ ಬಿಡಿಸಿದ್ದು, ಚಾಸಾ:1 ಆಸ್ಪತ್ರೆಗೆ ಹೋಗಿ ದೂರು ಕೊಟ್ಟ ಬಗ್ಗೆ ಗೊತ್ತಾಯಿತು ಎಂದು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ:7 ಎಂದು ಗುರುತಿಸಲಾಯಿತು. ನಿಪಿ:7 ರಂತೆ ಹೇಳಿಕೆ ನೀಡಿದ್ದರೂ ಕೂಡ, ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**– ಪಾಟೀ ಸವಾಲು – ಆರೋಪಿಯ ಪರವಾಗಿ ವಕೀಲರಿಂದ –**

**ಇಲ್ಲ ಎನ್ನುತ್ತಾರೆ .**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

*ಓದಿ ಹೇಳಿ ಕೇಳಿ ಸರಿ ಇದೆ.*

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.